**Akashvani : Bangalore**
**National Bulletin In Kannada**
**28.01.2025 / 19.35 hrs**

**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**28.01.2025 / 19.35 hrs**

**<><*<><>*><>**

**ಮುಖ್ಯಾಂಶಗಳು**

**೧. ಡೆಹರಾಡೂನ್‌ನಲ್ಲಿಂದು ರಾಷ್ಟ್ರೀಯ ಕ್ರೀಡಾಕೂಟ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ**

**೨. ನಾಳೆ ನೂರನೇ ಉಪಗ್ರಹ ಉಡಾವಣೆಗೆ ಇಸ್ರೋ ಸಜ್ಜು**

**೩. ಅಬುಧಾಬಿಯ ರೈಸಿನಾ ಸಂವಾದದಲ್ಲಿ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಭಾಗಿ**

**೪. ಮಹಾಕುಂಭಮೇಳ: ನಾಳೆ ಮೌನಿ ಅಮಾವಾಸ್ಯೆ ಹಿನ್ನೆಲೆಯಲ್ಲಿ ರೈಲ್ವೆ ಇಲಾಖೆಯಿಂದ ವಿಶೇಷ ರೈಲುಗಳ ಸಂಚಾರ**

**೫. ಟಿ-೨೦ ಕ್ರಿಕೆಟ್; ಇಂಗ್ಲೆಂಡ್ ವಿರುದ್ಧ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಭಾರತ**

**<><*<><>*><>**

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಇಂದು ೩೮ನೇ ರಾಷ್ಟ್ರೀಯ ಕ್ರೀಡಾಕೂಟವನ್ನು ಉದ್ಘಾಟಿಸಿದರು. ಇಂದಿನಿಂದ ಫೆಬ್ರವರಿ ೧೪ರವರೆಗೆ ಉತ್ತರಾಖಂಡದ ೮ ಜಿಲ್ಲೆಗಳ ೧೧ ನಗರಗಳಲ್ಲಿ ಈ ಕ್ರೀಡಾಕೂಟವು ನಡೆಯಲಿದೆ. ಉತ್ತರಾಖಂಡದ ರಜತ ಮಹೋತ್ಸವದ ಸಂದರ್ಭದಲ್ಲಿ ಈ ರಾಷ್ಟ್ರೀಯ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ. ೩೬ ರಾಜ್ಯ, ಕೇಂದ್ರಾಡಳಿತ ಪ್ರದೇಶದ ತಂಡಗಳು ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸಿವೆ. ೧೭ ದಿನಗಳ ಕಾಲ ೩೫ ಕ್ರೀಡಾ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ೩೩ ಕ್ರೀಡೆಗಳಿಗೆ ಪದಕಗಳನ್ನು ಪ್ರದಾನ ಮಾಡಲಾಗುವುದು. ಯೋಗ ಮತ್ತು ಮಲ್ಲಕಂಬವನ್ನು ಮೊದಲ ಬಾರಿಗೆ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಸೇರಿಸಲಾಗಿದೆ. ಈ ಕ್ರೀಡಾಕೂಟದಲ್ಲಿ ೧೦,೦೦೦ ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಿದ್ದಾರೆ. ಈ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸುವ ಅತಿಥಿಗಳು ಮತ್ತು ಕ್ರೀಡಾಪಟುಗಳು ೧೦,೦೦೦ಕ್ಕೂ ಹೆಚ್ಚು ಸಸಿಗಳನ್ನು ನೆಡಲಿದ್ದಾರೆ. ಇನ್ನು, ಮಹಿಳೆಯರ ಬ್ಯಾಸ್ಕೆಟ್‌ಬಲ್ ಪಂದ್ಯದಲ್ಲಿ ಉತ್ತರಾಖಂಡ ವಿರುದ್ಧ ೯೬-೫೪ ಅಂಕಗಳಿಂದ ಪಂಜಾಬ್ ತಂಡ ಗೆಲವು ಸಾಧಿಸಿದೆ. ಅಲ್ಲದೇ, ಮಹಿಳೆಯರ ಬಾಸ್ಕೆಟ್ ಬಾಲ್ ಪಂದ್ಯದ ಬಿ ಗುಂಪಿನಲ್ಲಿ ಛತ್ತೀಸ್‌ಗಢ ವಿರುದ್ಧ ೭೬-೭೫ ಅಂಕಗಳಿಂದ ದೆಹಲಿ ಜಯಗಳಿಸಿದೆ. ಮಹಿಳೆಯರ ಬೀಚ್ ಹ್ಯಾಂಡ್‌ಬಾಲ್ ಸ್ಪರ್ಧೆಯಲ್ಲಿ ಹರಿಯಾಣ ವಿರುದ್ಧ ೨-೦ ಅಂಕಗಳಿಂದ ಮಹಾರಾಷ್ಟ್ರ ಸೋಲು ಅನುಭವಿಸಿದೆ.

**<><*<><>*><>**

ಒಡಿಶಾದ ಭುವನೇಶ್ವರದ ಜನತಾ ಮೈದಾನದಲ್ಲಿ ಇಂದು ಉತ್ಕರ್ಷ್ ಒಡಿಶಾ - ಮೇಕ್ ಇನ್ ಒಡಿಶಾ ಸಮಾವೇಶವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಉದ್ಘಾಟಿಸಿದರು. ಸಮಾವೇಶ ಉದ್ದೇಶಿಸಿ ಮಾತನಾಡಿದ ಅವರು, ಭಾರತವನ್ನು ಪ್ರಮುಖ ಹೂಡಿಕೆ ತಾಣ ಹಾಗೂ ಕೈಗಾರಿಕಾ ಕೇಂದ್ರವಾಗಿ ಸ್ಥಾಪಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದ್ದು, ಈ ನಿಟ್ಟಿನಲ್ಲಿ ಹಲವಾರು ಯೋಜನೆಗಳನ್ನು ರೂಪಿಸಿದೆ ಎಂದು ಹೇಳಿದರು.

**ಧ್ವನಿ: ಪ್ರಧಾನಿ ( ೩೦ ಸೆಕೆಂಡ್)**

ಉತ್ತಮ ಕೈಗಾರಿಕಾ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವಲ್ಲಿ ರಾಜ್ಯದ ಸಾಧನೆಗಳನ್ನು ಎತ್ತಿ ತೋರಿಸುವ ಮೇಕ್ ಇನ್ ಒಡಿಶಾ ವಸ್ತುಪ್ರದರ್ಶನವನ್ನೂ ಕೂಡ ಇದೇ ವೇಳೆ ಪ್ರಧಾನಿ ಉದ್ಘಾಟಿಸಿದರು. ಎರಡು ದಿನಗಳ ಸಮಾವೇಶದಲ್ಲಿ ಉದ್ಯಮದ ನಾಯಕರು, ಹೂಡಿಕೆದಾರರು ಮತ್ತು ನೀತಿ ನಿರೂಪಕರು ಭಾಗವಹಿಸಿದ್ದಾರೆ. ೨೦ ವಿದೇಶಿಯರು ಸೇರಿದಂತೆ ೭ ಸಾವಿರದ ೫೦೦ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದಾರೆ. ಸಮಾವೇಶದಲ್ಲಿ ೧೦೦ಕ್ಕೂ ಹೆಚ್ಚು ಒಪ್ಪಂದಗಳಿಗೆ ಸಹಿ ಹಾಕಲಾಗುವುದು. ಇದು ೩೩ ಲಕ್ಷ ಜನರಿಗೆ ಉದ್ಯೋಗವನ್ನು ಸೃಷ್ಟಿಸುವ ನಿರೀಕ್ಷೆ ಇದೆ.

<><*<><>*><>

ಆಂಧ್ರ ಪ್ರದೇಶದ ಶ್ರೀಹರಿಕೋಟಾದ ಸತೀಶ್‌ಧವನ್ ಬಾಹ್ಯಾಕಾಶ ಕೇಂದ್ರದಿಂದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ - ಇಸ್ರೋ ವತಿಯಿಂದ ಚಾರಿತ್ರಿಕ ೧೦೦ನೇ ಉಪಗ್ರಹ ಉಡ್ಡಯನಕ್ಕೆ ಕ್ಷಣಗಣನೆ ಆರಂಭವಾಗಿದೆ. ಜಿಯೋಸಿಂಕ್ರೋನಸ್ ಭೂಕೇಂದ್ರಿತ ಉಪಗ್ರಹ ಉಡ್ಡಯನ ವಾಹನ ರಾಕೆಟ್‌ನಲ್ಲಿ ಎನ್‌ವಿಎಸ್-೨ ದಿಕ್ಸೂಚಿ ಉಪಗ್ರಹವನ್ನು ನಾಳೆ ಮುಂಜಾನೆ ಉಡ್ಡಯನ ಮಾಡಲಾಗುವುದು ಎಂದು ಇಸ್ರೋ ತಿಳಿಸಿದೆ. ಇದರ ನೇರ ಪ್ರಸಾರವನ್ನು ಇಸ್ರೋ ಯುಟ್ಯೂಬ್ ವಾಹಿನಿ ಮೂಲಕ ವೀಕ್ಷಿಸಬಹುದಾಗಿದೆ.

<><*<><>*><>

ಭಾರತ - ಮಧ್ಯಪ್ರಾಚ್ಯ ಸಂಬಂಧಗಳ ಹೆಚ್ಚುತ್ತಿರುವ ಪ್ರಾಮುಖ್ಯತೆ ಕುರಿತು ಅಬುಧಾಬಿಯಲ್ಲಿ ನಡೆದ ರೈಸಿನಾ ಸಂವಾದದ ಉದ್ಘಾಟನಾ ಅಧಿವೇಶನದಲ್ಲಿ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಒತ್ತಿ ಹೇಳಿದರು. ವಾಣಿಜ್ಯ, ಸಂಸ್ಕೃತಿ ಮತ್ತು ವಿಚಾರ ವಿನಿಮಯಗಳಲ್ಲಿ ಭಾರತ ಮತ್ತು ಮಧ್ಯಪ್ರಾಚ್ಯ ಐತಿಹಾಸಿಕ ಸಂಬಂಧಗಳನ್ನು ಹೊಂದಿವೆ. ಭಾರತ ಮತ್ತು ಮಧ್ಯಪ್ರಾಚ್ಯ ನಡುವಿನ ವ್ಯಾಪಾರವು, ವಾರ್ಷಿಕವಾಗಿ ೧೬೦ ಶತಕೋಟಿ ಅಮೆರಿಕನ್ ಡಾಲರ್‌ನಿಂದ ೧೮೦ ಶತಕೋಟಿ ಅಮೆರಿಕನ್ ಡಾಲರ್ ತಲುಪಿದೆ ಎಂದರು. ೯೦ ಲಕ್ಷಕ್ಕೂ ಹೆಚ್ಚು ಭಾರತೀಯರು ಮಧ್ಯಪ್ರಾಚ್ಯದಲ್ಲಿ ವಾಸಿಸುತ್ತಿದ್ದಾರೆ. ಇಂಧನದ ಹೊರತಾಗಿ ಭಾರತದ ಕಾರ್ಯತಂತ್ರದ ಹಿತಾಸಕ್ತಿಗಳು ಮೂಲಸೌಕರ್ಯ, ರಕ್ಷಣೆ, ತಂತ್ರಜ್ಞಾನ, ರಸಗೊಬ್ಬರ, ಹಸಿರು ಹೈಡ್ರೋಜನ್, ಜಲಾಂತರ್ಗಾಮಿ ಕೇಬಲ್‌ಗಳು ಸೇರಿದಂತೆ ಹಸಿರು ಇಂಧನ ಯೋಜನೆಗಳನ್ನು ಒಳಗೊಂಡಿವೆ ಎಂದು ಡಾ.ಎಸ್.ಜೈಶಂಕರ್ ಹೇಳಿದರು. ಅಂತಾರಾಷ್ಟ್ರೀಯ ಉತ್ತರ-ದಕ್ಷಿಣ ಸಾರಿಗೆ ಕಾರಿಡಾರ್-ಐಎನ್‌ಎಸ್‌ಟಿಸಿ ಮತ್ತು ಭಾರತ-ಮಧ್ಯಪ್ರಾಚ್ಯ-ಯೂರೋಪ್ ಆರ್ಥಿಕ ಕಾರಿಡಾರ್-ಐಎಸ್‌ಇಸಿ ನಂತಹ ಉಪಕ್ರಮಗಳು ನೈಸರ್ಗಿಕ ಸಂಪರ್ಕಗಳನ್ನು ಪುನರ್‌ಸ್ಥಾಪಿಸುವತ್ತ ಹೆಜ್ಜೆಗಳಾಗಿವೆ ಎಂದು ವಿದೇಶಾಂಗ ಸಚಿವರು ಪ್ರತಿಪಾದಿಸಿದರು.

**ಧ್ವನಿ: ಜೈಶಂಕರ್ ( ೩೦ ಸೆಕೆಂಡ್)**

<><*<><>*><>

ಮೌನಿ ಅಮವಾಸ್ಯೆಯಂದು ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಭಾಗವಹಿಸುವ ಹೆಚ್ಚಿನ ಸಂಖ್ಯೆಯ ಭಕ್ತರ ದಟ್ಟಣೆಯನ್ನು ನಿರ್ವಹಿಸಲು ಭಾರತೀಯ ರೈಲ್ವೆಯು ಹೆಚ್ಚುವರಿ ರೈಲುಗಳ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಿದೆ. ಈ ಕುರಿತು ಮಾಹಿತಿ ನೀಡಿದ ರೈಲ್ವೆ ಮಂಡಳಿಯ ಅಧ್ಯಕ್ಷ ಮತ್ತು ಸಿಇಒ ಸತೀಶ್ ಕುಮಾರ್, ಈಗಾಗಲೇ ಯೋಜಿಸಲಾದ ವಿಶೇಷ ರೈಲುಗಳ ಜೊತೆಗೆ ಹೆಚ್ಚುವರಿ ೬೦ ವಿಶೇಷ ರೈಲುಗಳನ್ನು ಓಡಿಸಲು ರೈಲ್ವೆ ನಿರ್ಧರಿಸಿದೆ. ಇದರೊಂದಿಗೆ ಮೌನಿ ಅಮಮಾಸ್ಯೆಯಂದು ಒಟ್ಟು ೧೯೦ ವಿಶೇಷ ರೈಲುಗಳು ಸಂಚರಿಸಲಿವೆ. ಅಲ್ಲದೆ, ಇದರ ಜೊತೆಗೆ ಎಂದಿನಂತೆ ೧೧೦ ನಿಯಮಿತ ರೈಲುಗಳು ಸಂಚರಿಸಲಿವೆ. ಪ್ರಯಾಗ್‌ರಾಜ್‌ನಿಂದ ಪ್ರತಿ ನಾಲ್ಕು ನಿಮಿಷಗಳಿಗೊಮ್ಮೆ ಪ್ರಯಾಣಿಕರಿಗೆ ರೈಲ್ವೆ ಲಭ್ಯವಿರಲಿವೆ ಎಂದು ತಿಳಿಸಿದ್ದಾರೆ.

<><*<><>*><>

೨೦೨೪ರಲ್ಲಿ ಭಾರತದಲ್ಲಿ ೫ ಲಕ್ಷಕ್ಕೂ ಹೆಚ್ಚು ರಸ್ತೆ ಅಪಘಾತಗಳು ಸಂಭವಿಸಿ, ೧ ಲಕ್ಷ ೮೦ ಸಾವಿರಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ. ನವದೆಹಲಿಯಲ್ಲಿಂದು ಗ್ರಾಮೀಣಾಭಿವೃದ್ಧಿ ಮತ್ತು ತಂತ್ರಜ್ಞಾನ ಕೇಂದ್ರ ಆಯೋಜಿಸಿದ್ದ 'ಪ್ರಾಜೆಕ್ಟ್ ಅಭಯ್' ಸಮಾರಂಭದ ಸಮಾರೋಪದಲ್ಲಿ ಮಾತನಾಡಿದ ಅವರು, ಅಪಘಾತಗಳಲ್ಲಿ್ಲ ಮೃತಪಟ್ಟವರಲ್ಲಿ ಶೇಕಡ ೬೬ ರಷ್ಟು

ಮಂದಿ ೧೮ ರಿಂದ ೩೪ ವರ್ಷ ವಯೋಮಿತಿಯವರಾಗಿದ್ದಾರೆ. ರಸ್ತೆ ಅಪಘಾತಗಳಿಂದಾಗಿ ದೇಶದ ಜಿಡಿಪಿ ಯ ಶೇಕಡ ೩ ರಷ್ಟು ನಷ್ಟವಾಗುತ್ತಿದೆ ಎಂದು ಹೇಳಿದರು. ಸಾರಿಗೆ ವ್ಯವಸ್ಥೆ ಸುಗಮಗೊಳಿಸಿ, ರಫ್ತು ಹೆಚ್ಚಿಸುವ ಅಗತ್ಯವಿದೆ. ಟ್ರಕ್ ಚಾಲಕರ ಕೊರತೆಯ ಸಮಸ್ಯೆ ತೀವ್ರವಾಗಿದ್ದು, ದೇಶವು ಪ್ರಸ್ತುತ ೨೨ ಲಕ್ಷ ಚಾಲಕರ ಕೊರತೆಯನ್ನು ಎದುರಿಸುತ್ತಿದೆ ಎಂದರು. 'ಪ್ರಾಜೆಕ್ಟ್ ಅಭಯ್' ದೇಶದಾದ್ಯಂತ ಟ್ರಕ್ ಚಾಲಕರ ಜೀವನವನ್ನು ಉತ್ತಮಗೊಳಿಸುವ ಉದ್ದೇಶ ಹೊಂದಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಈ ಯೋಜನೆಯು, ೬ ರಾಜ್ಯಗಳು ಮತ್ತು ೧೫ ನಗರಗಳಲ್ಲಿ ೫೦ ಸಾವಿರಕ್ಕೂ ಹೆಚ್ಚು ಟ್ರಕ್ ಚಾಲಕರ ಜೀವನವನ್ನು ಬದಲಿಸಿದೆ ಎಂದು ಸಚಿವ ನಿತಿನ್ ಗಡ್ಕರಿ ಮಾಹಿತಿ ನೀಡಿದರು.

**<><*<><>*><>**

ವರದಕ್ಷಿಣೆ ಮತ್ತು ಕೌಟುಂಬಿಕ ಹಿಂಸಾಚಾರ ಕಾನೂನುಗಳ ಪುನರ್ ವಿಮರ್ಶೆ ಹಾಗೂ ಸುಧಾರಣೆ ಮಾಡುವ ಉದ್ದೇಶದಿಂದ ತಜ್ಞರ ಸಮಿತಿಯನ್ನು ನೇಮಿಸುವಂತೆ ಕೋರಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಸತೀಶ್ ಚಂದ್ರ ಶರ್ಮಾ ಅವರನ್ನೊಳಗೊಂಡ ನ್ಯಾಯ ಪೀಠವು, ಈ ಅರ್ಜಿಯನ್ನು ಪರಿಗಣಿಸಲು ನಿರಾಕರಿಸಿದ್ದು, ಸಮಾಜವು ಬದಲಾವಣೆ ಆಗಬೇಕಿದ್ದು, ನ್ಯಾಯ ಪೀಠವು ಏನೂ ಮಾಡಲಾಗದು ಎಂಬ ಅಭಿಪ್ರಾಯ ಪಟ್ಟಿದೆ. ಇತ್ತೀಚಿಗೆ ಬೆಂಗಳೂರಿನ ಟೆಕ್ಕಿ ಆತ್ಮಹತ್ಯೆ ಪ್ರಕರಣದ ಹಿನ್ನೆಲೆಯಲ್ಲಿ ಕೌಟುಂಬಿಕ ಹಿಂಸಾಚಾರ ಕಾನೂನುಗಳ ದುರುಪಯೋಗ ತಡೆಯಲು ಸುಧಾರಣೆಗಳನ್ನು ತರುವ ಉದ್ದೇಶವನ್ನು ಈ ಅರ್ಜಿ ಹೊಂದಿತ್ತು. ಅರ್ಜಿಯಲ್ಲಿ ಮರದಕ್ಷಿಣೆ ಮತ್ತು ಮದುವೆಯ ಸಮಯದಲ್ಲಿ ನೀಡುವ ಉಡುಗೊರೆ ಹಾಗೂ ಹಣದ ದಾಖಲೆಗಳನ್ನು ಸರ್ಕಾರಿ ದಾಖಲೆಗಳಾಗಿ ನೋಂದಾಯಿಸುವಂತೆ ಮಾರ್ಗಸೂಚಿಗಳನ್ನು ರೂಪಿಸುವ ಕುರಿತು ಮನವಿ ಮಾಡಲಾಗಿತ್ತು. ಇದನ್ನು ಪ್ರಮಾಣಪತ್ರದ ಮೂಲಕ ನಿಗದಿಪಡಿಸಿ, ಮದುವೆಯ ನೋಂದಣಿಗೆ ಒಳಪಡಿಸುವಂತೆ ಕೇಳಲಾಗಿತ್ತು. §ವರದಕ್ಷಿಣೆ ನಿರ್ಬಂಧ ಕಾರ್ಯ ಮತ್ತು ಐಪಿಸಿ ಸೆಕ್ಷನ್ ೪೯೮ ಎ ಇವು ಮಹಿಳೆಯರನ್ನು ವರದಕ್ಷಿಣೆ ಮತ್ತು ಹಿಂಸೆಯಿಂದ ರಕ್ಷಿಸಲು ರೂಪಿಸಲಾಗಿದೆ. ಆದರೆ, ಈ ಕಾನೂನುಗಳು ಕೆಲವೊಮ್ಮೆ ದುರುಪಯೋಗಕ್ಕೆ ಒಳಗಾಗುತ್ತಿದ್ದು, ಪತಿಯ ಕುಟುಂಬದ ವಿರುದ್ಧ ಅನಗತ್ಯ ಮತ್ತು ಅಕ್ರಮ ಆರೋಪಗಳನ್ನು ಮಾಡಲು ಬಳಸಲಾಗುತ್ತಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿತ್ತು.

**<><*<><>*><>**

ಗುಜರಾತ್‌ನ ರಾಜ್‌ಕೋಟ್‌ನಲ್ಲಿರುವ ನಿರಂಜನ್ ಷಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ ಮತ್ತು ಇಂಗ್ಲೆಂಡ್ ನಡುವಿನ ಮೂರನೇ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ, ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ. ಇತ್ತೀಚಿನ ವರದಿ ಬಂದಾಗ, ಇಂಗ್ಲೆಂಡ್, ೯.೧ ಓವರ್‌ಗಳಲ್ಲಿ ೨ ವಿಕೆಟ್ ನಷ್ಟಕ್ಕೆ ೮೪ ರನ್ ಮಾಡಿ ಆಡುತ್ತಿದೆ. ಸೂರ್ಯಕುಮಾರ್ ಯಾದವ್ ನೇತೃತ್ವದ ಭಾರತ ತಂಡ ಐದು ಪಂದ್ಯಗಳ ಸರಣಿಯಲ್ಲಿ ಈಗಾಗಲೇ ೨-೦ ಮುನ್ನಡೆ ಸಾಧಿಸಿದೆ. ಸರಣಿಯ ಆರಂಭಿಕ ಪಂದ್ಯದಲ್ಲಿ, ಕೋಲ್ಕತ್ತಾದಲ್ಲಿ ಭಾರತ ತಂಡ, ಏಳು ವಿಕೆಟ್‌ಗಳಿಂದ ಇಂಗ್ಲೆಂಡ್ ಅನ್ನು ಸೋಲಿಸಿತು. ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಎರಡನೇ ಟಿ-೨೦ ಪಂದ್ಯದಲ್ಲಿ ಭಾರತ, ಎರಡು ವಿಕೆಟ್‌ಗಳ ರೋಚಕ ಗೆಲುವು ಸಾಧಿಸಿತು.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>**